ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ      ದಿನಾಂಕ : DATE : 01/07/2019

# ರಾಜಕೀಯ ಅಸ್ಥಿರತೆ ನಡುವೆ ಸಂಪುಟ ಸಭೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಇರುವುದರಿಂದ ಮಂತ್ರಿ ಮಂಡಲದಿಂದ ಪ್ರಮುಖ ನೀತಿ- ನಿರ್ಧಾರ ಕೈಗೊಳ್ಳದೆ ಎಚ್ಚರ ವಹಿಸುವಂತೆ ರಾಜ್ಯಪಾಲರು ಸರ್ಕಾರಕ್ಕೆ ಸೂಚಿಸಿದ್ದರೂ, ಗುರುವಾರ ನಡೆಯಲಿರುವ ಸಂಪುಟದ ಮುಂದೆ 15 ವಿಷಯಗಳನ್ನು ತರಲಾಗುತ್ತಿದೆ. ಮಂಡ್ಯದ ಮೈಷುಗರ್ ಕಾರ್ಖಾನೆ ಸಂಬಂಧ ಸಿಎಂ ಕುಮಾರಸ್ವಾಮಿ ಉನ್ನತಾಧಿಕಾರಿಗಳ ಸಭೆ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯದರ್ಶಿಗಳನ್ನು ರಾಜಭವನಕ್ಕೆ ಕರೆಯಿಸಿಕೊಂಡ ರಾಜ್ಯಪಾಲರು, 'ಸರ್ಕಾರ ಅಲ್ಪಮತಕ್ಕೆ ಕುಸಿದಿರುವ ಸಾಧ್ಯತೆಯಿದೆ. ರಾಜಕೀಯವಾಗಿ ಇಂತಹ ಸೂಕ್ಷ್ಮ ಪರಿಸ್ಥಿತಿ ಇರುವಾಗ ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳಬೇಡಿ' ಎಂದು ಸೂಚಿಸಿದ್ದರು.



» ರಾಜ್ಯಪಾಲರ ಸೂಚನೆ ಧಿಕ್ಕರಿಸಿ ಪ್ರಮುಖ ನಿರ್ಧಾರ?

» ಇಂದಿನ ಅಜೆಂಡಾದಲ್ಲಿ 15 ವಿಷಯಗಳು

**ಚರ್ಚಿತ ವಿಷಯಗಳು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಭಜಿಸುವ ಸಂಬಂಧ ಜಾರಿಗೆ ತರಲು ಉದ್ದೇಶಿಸಿದ್ದ ದಿ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಬಿಲ್-2015 ಹಿಂಪಡೆಯುವುದು. ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-2ರ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 0.00ದಿಂದ 95 ವರೆಗೆ 750 ಕೋಟಿ ರೂ. ವೆಚ್ಚದ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗೆ ತಾಂತ್ರಿಕ ಅನುಮೋದನೆ ನೀಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡುವುದು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೊಮ್ಮವಾರ ಗ್ರಾಮದಲ್ಲಿ 4.34 ಎಕರೆ ಗೋಮಾಳ ಜಮೀನನ್ನು ಶ್ರೀ ಗುರಗುಂಡ ಬ್ರಹ್ಮೇಶ್ವರಸ್ವಾಮಿ ವಿದ್ಯಾಸಂಸ್ಥೆಗೆ ಶೈಕ್ಷಣಿಕ ಹಾಗೂ ಸಂಸ್ಥೆಯ ವಿವಿಧೋದ್ದೇಶಗಳಿಗೆ ಮಂಜೂರು ಮಾಡುವುದು ಸೇರಿ ಒಟ್ಟು 15 ವಿಷಯಗಳು ಸಂಪುಟ ಸಭೆ ಮುಂದೆ ಬರಲಿವೆ.